VIJAYAKUMAR KANNUR
Digitally signed by VIJAYAKUMAR KANNUR
Date: 2025.12.15 17:37:44 +0530



**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ</u>**

**<u>ಸಾಕ್ಷಿಗೆ ಇಂದು ದಿನಾಂಕ 12.12.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಎಸ್ ಡಿ ವಕೀಲರಿಂದ :</u>**

ನಾನು ಕಳೆದ 4 ವರ್ಷಗಳಿಂದ ಈ ದೂರುದಾರ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರುವೆನು. ಆರೋಪಿ ಮತ್ತು ನಮ್ಮ ಬ್ಯಾಂಕಿನಿಂದ ಸಾಲ ಪಡೆದುಕೊಂಡ ಬಗ್ಗೆ ಆ ಹಣಕಾಸಿನ ವ್ಯವಹಾರದ ಕುರಿತು ನನಗೆ ವೈಯಕ್ತಿಕವಾಗಿ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಹೆಸರಿನಲ್ಲಿ ಚರ ಮತ್ತು ಸ್ಥಿರಾಸ್ತಿ ಇದ್ದ ಬಗ್ಗೆ ನಾನು ವಿಚಾರಣೆ ಮಾಡಿರುವುದಿಲ್ಲ.

2. ನಮ್ಮ ಬ್ಯಾಂಕಿನಲ್ಲಿ ಆರೋಪಿ ಲಾಂಗ್ ಟರ್ಮನ ಲೋನಿನ ಒಂದು ಖಾತೆಯನ್ನು ಹೊಂದಿರುವನು. ನಮ್ಮ ಬ್ಯಾಂಕಿನ ನಿಯಮಾವಳಿಯ ಪ್ರಕಾರ ಸಾಲ ಪಡೆದುಕೊಳ್ಳಬೇಕಾದರೆ ಆ ವ್ಯಕ್ತಿ ಮೊದಲಿಗೆ ಶೇರನ್ನು ಪಡೆದುಕೊಂಡು ಸದಸ್ಯನಾಗಬೇಕು. ಆರೋಪಿ ನಮ್ಮ ಬ್ಯಾಂಕಿನಲ್ಲಿ ಶೇರನ್ನು ಪಡೆದುಕೊಂಡು ಖಾತೆಯನ್ನು ಹೊಂದಿರುವನು. ಆರೋಪಿಯ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ಸಹ ಹೊಂದಿರುವನು. ಆರೋಪಿ ನಮ್ಮ ಬ್ಯಾಂಕಿನಲ್ಲಿ ಫಿಗ್ಮಿ ಖಾತೆ ತೆಗೆದಿರುವನೋ ಅಥವಾ ಇಲ್ಲವೋ ಎಂದು ನನಗೆ ಮಾಹಿತಿ ಇರುವುದಿಲ್ಲ. ಆರೋಪಿ ನಮ್ಮ ಬ್ಯಾಂಕಿನಲ್ಲಿ 2018 ರಲ್ಲಿ ಸಾಲ ಪಡೆದಿರುವನು, ಆದರೆ ದಿನಾಂಕ ನೆನಪಿರುವುದಿಲ್ಲ. ಈ ಸಾಲ ಪಡೆಯುವ ಪೂರ್ವದಲ್ಲಿ ಆರೋಪಿ ಸಾಲದ ಅರ್ಜಿಯನ್ನು ಸಲ್ಲಿಸಿರುವುದಿಲ್ಲ, ಏಕೆಂದರೆ ಆತ ನಮ್ಮ ಬ್ಯಾಂಕಿನ ಶೇರುದಾರನಾಗಿರುವುದರಿಂದ. ಸಾಮಾನ್ಯವಾಗಿ ಸಾಲ ಮಂಜೂರು ಮಾಡುವ ಪೂರ್ವದಲ್ಲಿ ಬ್ಯಾಂಕಿನ ಆಡಳಿತ ಮಂಡಳಿಯವರು ಸಾಲದ ಬಗ್ಗೆ ಮತ್ತು ಸಾಲ ಪಡೆಯುವ ವ್ಯಕ್ತಿಯ ಬಗಗೆ ಠರಾವು ಪಾಸು ಮಾಡಬೇಕಾಗುತ್ತದೆ ಎಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು.

ನಮ್ಮ ಬ್ಯಾಂಕಿನಿಂದ ರೂ. 1 ಲಕ್ಷ ಕ್ಕಿಂತ ಹೆಚ್ಚಿನ ಮೊತ್ತ ನೀಡಬೇಕಾದರೆ ಆ ಬ್ಯಾಂಕಿನ ಆಡಳಿತ ಮಂಡಳಿಯ ಸದಸ್ಯರನ್ನು ಭದ್ರತೆಯನ್ನಾಗಿ ಪಡೆದುಕೊಳ್ಳುತ್ತೇವೆ ಎಂದರೆ ಸರಿಯಲ್ಲ. ಆದರೆ ಬ್ಯಾಂಕಿನ ಚೇರಮೆನ್ ರ ಸಹಿಯನ್ನು ಮಾತ್ರ ಪಡೆದುಕೊಳುಳುತ್ತೇವೆ ಎಂದು ಸಾಕ್ಷಿ ಉತ್ತರಿಸುವರು. ಈ ಚೇರಮನ್ ರ ಸಹಿ ಪಡೆದುಕೊಂಡ ಬಗ್ಗೆ ಸಾಲ ದಾಖಲಾತಿಗಳು ಇರುವವು.

3. ಈ ಸಾಲ ನೀಡುವ ಸಮಯದಲ್ಲಿ ದೂರುದಾರ ಬ್ಯಾಂಕಿನ ಶಾಖೆಯ ಮ್ಯಾನೇಜರ ಯಾರು ಇದ್ದರು ಎಂದು ನನಗೆ ಮಾಹಿತಿ ಇರುವುದಿಲ್ಲ. ವೆಂಕಟೇಶ ನಾಯಕ ಎಂಬುವವರು 2018 ರಲ್ಲಿ ಮ್ಯಾನೇಜರಾಗಿ ಕೆಲಸ ನಿರ್ವಹಿಸುತ್ತಿದ್ದರು ಎಂದು ತನಗೆ ಮಾಹಿತಿ ಇರುವುದಿಲ್ಲ ಎಂದು ಸಾಕ್ಷಿ ಉತ್ತರಿಸುವರು. ಅವರು ನಮ್ಮ ಸಂಸ್ಥೆಗೆ ಮೋಸ ಮಾಡುತ್ತಿರುವುದಾಗಿ ಎಂದು ಹೇಳಿ ಅವರನ್ನು ಸೇವೆಯಿಂದ ತೆಗೆದು ಹಾಕಿರುವರು ಎಂದರೆ ಸರಿಯಲ್ಲ, ಅವರು ಸ್ವ ಇಚ್ಛೆಯಿಂದ ರಾಜಿನಾಮೆ ಕೊಟ್ಟಿರುವರು. ಇವರು ನಮ್ಮ ಬ್ಯಾಂಕಿನಿಂದ ಬೇರೆ ಬೇರೆ ಜನರ ಹೆಸರಿನಲ್ಲಿ ಸಾಲ ಮಂಜೂರು ಮಾಡಿಕೊಂಡು ಆ ಹಣ ತಮ್ಮ ಖಾತೆಗೆ ವರ್ಗಾವಣೆ ಮಾಡಿಕೊಂಡಿದ್ದು, ಈ ಸಂಗತಿ ಬ್ಯಾಂಕಿನ ಆಡಳಿತ ಮಂಡಳಿಗೆ ಗೊತ್ತಾದ ನಂತರ ತನಿಖೆ ಮಾಡಿ ವೆಂಕಟೇಶ ನಾಯಕ ಎಂಬುವವರನ್ನು ಕೆಲಸದಿಂದ ವಜಾಗೊಳಿಸಿರುವರು ಎಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು. ವೆಂಕಟೇಶ ನಾಯಕ ಸ್ವ ರಾಜಿನಾಮೆ ಕೊಟ್ಟ ಬಗ್ಗೆ ದಾಖಲೆ ಇರುವುದಿಲ್ಲ.

4. ಆರೋಪಿಯ ಬ್ಯಾಂಕ ಖಾತೆಗೆ ಈ ಸಾಲದ ಹಣ ಯಾವ ದಿನಾಂಕ ವರ್ಗಾವಣೆ ಮಾಡಿದ ಬಗ್ಗೆ ನನಗೆ ನೆನಪಿರುವುದಿಲ್ಲ. ಸಾಲ ಪಡೆದಿರುವ ಬಗ್ಗೆ ಆರೋಪಿಯ ನಿವೇಶನವನ್ನು ಅಡಮಾನ ಮಾಡಿ ಕೊಟ್ಟಿರುವನು. ಇದಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲಾತಿ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನಮ್ಮ ಬ್ಯಾಂಕಿನಿಂದ ಕೇವಲ ರೂ. 1 ಲಕ್ಷ ಹಣ ಸಾಲ ಪಡೆದುಕೊಂಡಿರುವನು ಎಂದರೆ ಸರಿಯಲ್ಲ. ಆ ರೂ. 1 ಲಕ್ಷ ಹಣದಲ್ಲಿ ರೂ. 10 ಸಾವಿರ ಹಣವನ್ನು ಠೇವಣಿ ಅಂತ ಕಡಿತಗೊಳಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿಯ ಉಳಿತಾಯ ಖಾತೆಗೆ ರೂ. 5 ಲಕ್ಷ ಹಣ ಜಮಾ ಮಾಡಿದ ಬಗ್ಗೆ ದಾಖಲಾತಿಗಳು

ಇರುವವು. ಆರೋಪಿಯ ಯಾವ ಆಸ್ತಿಯನ್ನು ಅಡಮಾನ ಮಾಡಿಕೊಂಡು ಸಾಲ ಮಂಜೂರು ಮಾಡಿರುವೆವು ಎಂದು ನನಗೆ ನೆನಪಿರುವುದಿಲ್ಲ.

5. ಸಾಮಾನ್ಯವಾಗಿ ಸಾಲ ಮಂಜೂರು ಮಾಡುವ ಪೂರ್ವದಲ್ಲಿ ಆಡಳಿತ ಮಂಡಳಿಯ ಸಭೆಯಲ್ಲಿ ಯಾವ ವ್ಯಕ್ತಿಗೆ ಎಷ್ಟು ಹಣ ಸಾಲ ಮಂಜೂರು ಮಾಡುತ್ತೇವೆ ಅಂತ ಠರಾವು ಪಾಸ ಮಾಡಬೇಕಾಗುತ್ತದೆ ಎಂದರೆ ಸರಿ. ಪ್ರತಿ ವರ್ಷ ಬ್ಯಾಂಕಿನಿಂದ ಸಾಲ ನೀಡುವುದರ ಬಗ್ಗೆ ಮತ್ತು ಅದರ ಮೇಲೆ ಬಡ್ಡಿಯ ದರದ ಬಗ್ಗೆ ಪಾಂಪಪ್ಲೇಟಗಳನ್ನು ಮುದ್ರಿಸುತ್ತೇವೆ ಎಂದರೆ ಸರಿಯಲ್ಲ. ಕೇವಲ ನಿಗಧಿತ ಅವಧಿಯ ಠೇವಣಿಗಳಿಗೆ ಸಂಬಂಧಪಟ್ಟಂತೆ ಮಾತ್ರ ಪಾಂಪಪ್ಲೇಟ್ ಗಳನ್ನು ಮುದ್ರಿಸುತ್ತೇವೆ. ಈ ಸಾಲ ನೀಡುವುದರ ಬಗ್ಗೆ ನಮ್ಮ ಬ್ಯಾಂಕಿನಲ್ಲಿ ಸಾರ್ವಜನಿಕರ ಮಾಹಿತಿಯ ಬೋರ್ಡನ್ನು ಹಚ್ಚಿದ್ದೇವೆ ಎಂದರೆ ಸರಿ. ಆರೋಪಿ ಸಾಲದ ಹಣವನ್ನು ಮರಳಿ 60 ಕಂತುಗಳಲ್ಲಿ ನೀಡಬೇಕೆಂದು ಠರಾವು ಪಾಸು ಮಾಡಿದ್ದೇವು. ಶೇ. 17 ರ ಬಡ್ಡಿಯನ್ನು ನೀಡತಕ್ಕದ್ದು ಎಂದು ಠರಾವು ಪಾಸ ಮಾಡಿರುವೆವು.

6. ಆರೋಪಿಗೆ ಮಂಜೂರು ಮಾಡಿದ ರೂ. 1 ಲಕ್ಷದ ಸಾಲದ ಹಣದ ಭದ್ರತೆಗಾಗಿ ಆತನ ಕಡೆಯಿಂದ ಒಂದು ಖುಲ್ಲಾ ಚೆಕ್ ನ್ನು ಪಡೆದುಕೊಂಡಿದ್ದೇವು ಎಂದರೆ ಸರಿಯಲ್ಲ. ಸಾಲ ಪಡೆದುಕೊಂಡ ವ್ಯಕ್ತಿ withdrawal form ಮೇಲೆ ಸಹಿ ಮಾಡಿ ಸಲ್ಲಿಸಿದಾಗ ಆ ಹಣವನ್ನು ನೀಡುತ್ತೇವೆ. ಕೇವಲ ರೂ. 25 ಸಾವಿರ ಹಣ ನಗದು ರೂಪದಲ್ಲಿ ಆ ವ್ಯಕ್ತಿಗೆ ನೀಡುತ್ತೇವೆ ಎಂದರೆ ಸರಿಯಲ್ಲ. ರೂ. 2 ಲಕ್ಷದವರೆಗೂ ನಗದು ರೂಪದಲ್ಲಿ ಒಂದು ದಿನ ನೀಡುತ್ತೇವೆ. ಆರೋಪಿ ಎಷ್ಟು ಹಣ withdraw ಮಾಡಿಕೊಂಡಿರುವನು ಮತ್ತು ಎಷ್ಟು ಹಣ ಆತನ ಖಾತೆಯಲ್ಲಿ ಜಮೆ ಇರುವುದು ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಆರೋಪಿ ಕೇಲವ ರೂ. 89 ಸಾವಿರ ಹಣವನ್ನು withdraw ಮಾಡಿಕೊಂಡಿದ್ದು, ಉಳಿದ ರೂ. 4 ಲಕ್ಷ ಹಣವನ್ನು ಬ್ಯಾಂಕಿನ ಮ್ಯಾನೇಜರಾದ ವೆಂಕಟೇಶ ನಾಯಕ ಇವರ ಖಾತೆಗೆ ಜಮೆ ಮಾಡಿಕೊಂಡಿರುವರು ಎಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು. ಈ ದೂರು ದಾಖಲು ಮಾಡುವ ಸಮಯದಲ್ಲಿ ಆರೋಪಿ ನಮ್ಮ ಬ್ಯಾಂಕಿಗೆ ರೂ. 7 ಲಕ್ಷಕ್ಕಿಂತ ಹೆಚ್ಚಿನ ಹಣ ಸಂದಾಯ ಮಾಡಬೇಕಾಗಿತ್ತು. ಆರೋಪಿ ರೂ. 1 ಲಕ್ಷ ಹಣ ಸಾಲ ಪಡೆಯುವ ಸಮಯದಲ್ಲಿ ಒಂದು ಖಾಲಿ ಚೆಕ್ ನ್ನು ಸಹಿ ಮಾಡಿ ನೀಡಿದ್ದನು ಎಂದರೆ

ಸರಿಯಲ್ಲ. ನಿಪಿ 1 ರಲ್ಲಿ ನಮೂದು ಮಾಡಿರುವಂತಹ ಹಣವನ್ನು ನೀಡುವಂತಹ ಬಾಧ್ಯತೆ ಆರೋಪಿ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ.

7. ದಿಃ 08.08.2023 ರಂದು ಆರೋಪಿ ನಿಪಿ 2 ರ ಚೆಕ್ ನ್ನು ನೀಡಿರುವನು. ನಿಪಿ 2 ರ ಚೆಕ್ ನ್ನು ಕಾನೂನು ಬದ್ದವಾದ ಋಣದ ಸಂದಾಯಕ್ಕಾಗಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 2 ರ ಮೇಲಿನ ಬರವಣಿಗೆ ಆರೋಪಿಯದಾಗಿರುವುದಿಲ್ಲ ಎಂದರೆ ಸಾಕ್ಷಿಯು ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸಿರುವರು. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 2 ರ ಚೆಕ್ ಲೋಕಾಪೂರದ ಬಿಡಿಸಿಸಿ ಬ್ಯಾಂಕ್ ದಾಗಿರುವುದು. ರೂ. 1 ಲಕ್ಷ ಸಾಲದ ಹಣದ ವಸುಲಾತಿಗಾಗಿ ಆರೋಪಿಯ ವಿರುದ್ದ ನೋಟಿಸು ಜಾರಿಮಾಡಿರುವುದಿಲ್ಲ, ಆದರೆ ರೂ. 5 ಲಕ್ಷ ಸಾಲದ ಹಣದ ವಸುಲಾತಿಗಾಗಿ ನೋಟಿಸು ಜಾರಿ ಮಾಡಿರುವೆವು. ಆ ನೋಟಿಸಿನಲ್ಲಿ ಸಾಲದ ಹಣದ ಮೇಲಿನ ಬಡ್ಡಿ ಮತ್ತು ದಂಡದ ಬಡ್ಡಿಯನ್ನು ನಮೂದು ಮಾಡಿರುವೆವು, ಆದರೆ ಎಷ್ಟು ಪ್ರತಿಷತ ಅಂತ ನಮೂದು ಮಾಡಿರುವುದಿಲ್ಲ. ಆರೋಪಿಯ ನಾಗನಾಪೂರ ವಿಳಾಸಕ್ಕೆ ನೋಟಿಸು ಕಳುಹಿಸಿಕೊಟ್ಟಿರುವೆವು. ಅದು ಆರೋಪಿಗೆ ಜಾರಿಯಾಗಿರುವುದಿಲ್ಲ ಎಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು.

8. ಸಾಲದ ಅರ್ಜಿಯಲ್ಲಿ ಸಾಲದ ಕಾರಣವನ್ನು ನಮೂದು ಮಾಡಿರುತ್ತಾರೆ ಎಂದರೆ ಸರಿ. ಆರೋಪಿ ವ್ಯಾಪಾರ ಮಾಡುವ ಸಲುವಾಗಿ ರೂ. 5 ಲಕ್ಷ ಸಾಲ ಪಡೆದುಕೊಂಡಿರುವನು. ಯಾವ ವ್ಯಾಪಾರ ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಈ ಪ್ರಕರಣ ದಾಖಲು ಮಾಡುವ ಪೂರ್ವದಲ್ಲಿ ನೀಡಿರುವ ನೋಟಿಸು ಆರೋಪಿಗೆ ಜಾರಿಯಾಗದೇ ಇರುವುದರಿಂದ ಆ ಕಾರಣಕ್ಕೆ ಆತ ಉತ್ತರ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 2 ರ ಚೆಕ್ ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣ ಇರುವುದಿಲ್ಲ ಎಂದು ಹೇಳಿ ಅಮಾನ್ಯಗೊಂಡು ಬಂದಿರುವುದು.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೋರುತ್ತಾರೆ, ಪ್ರಕರಣವನ್ನು

ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ

VIJAYAKUMAR KANNUR

Digitally signed by VIJAYAKUMAR KANNUR
Date: 2025.12.15 17:37:51 +0530